ಅಸಲು ದಾವಾ ನಂ.396/2018

ಡಿ ಡಬ್ಲ್ಯೂ: 1

(ಸಾಕ್ಷಿಯನ್ನು ಈ ದಿನ ದಿನಾಂಕ.10.08.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲು ಃ ವಾದಿ ಪರ ಶ್ರೀ ಎಮ್ ಸಿ ವಾಯ್ ವಕೀಲರಿಂದಃ

6. ಆಲಮೇಲ ಗ್ರಾಮದ ಸರ್ವೇ ನಂಬರ 717 ಮಾದೇಪ್ಪ ಅವರ ನಂತರ ಯಾರಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ಅವರ ಮಕ್ಕಳಾದ ಶಿವಪ್ಪ ಅವರಿಗೆ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಆಸ್ತಿ ಮಾದಪ್ಪ ಅವರು ತೀರಿಕೊಂಡ ನಂತರ ಅವರ ಮಕ್ಕಳ ಹೆಸರಿಗೆ ವಾರಸಾ ಆಗಿರುತ್ತದೆ. ಸದರಿ ವಿಷಯ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಪೀರಪ್ಪ 2016 ನೇ ಸಾಲಿನಂದು ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿಯವರು ಜೀವಂತ ಇದ್ದಾಗ ಸರ್ವೇ ನಂಬರ ಆಲಮೇಲ ಗ್ರಾಮದ ಸರ್ವೇ ನಂಬರ 717 ಅವರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ಅವರು ಜೀವಂತ ಇರುವಾಗಲೇ ನಮ್ಮ ಹೆಸರಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಪೀರಪ್ಪ 2016 ರಲ್ಲಿ ತೀರಿಕೊಂಡ ನಂತರ ವಾರಸಾ ನಾತೆಯಿಂದ ಅವರ ಮಕ್ಕಳ ಹೆಸರಿಗೆ ಆಸ್ತಿ ಬಂದಿರುತ್ತದೆ ಎಂದರೆ ಸಾಕ್ಷಿ ಅವರು ಜೀವಂತ ಇರುವಾಗಲೇ ಬಿಟ್ಟು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ.

7. ಮಾದಪ್ಪ ಅವರ ಹೆಸರಿಗೆ ಆಸ್ತಿ ಬಂದ ನಂತರ ರಾಯಪ್ಪ ಅವರಿಗೆ ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ. ಪೀರಪ್ಪ, ಮಾದಪ್ಪ ಮತ್ತು ರಾಯಪ್ಪ ರವರು ಒಟ್ಟಾಗಿ ಆಸ್ತಿ ಖರೀದಿ ಮಾಡಿದ್ದು ನಾವು ಖೊಟ್ಟಿ ರೀತಿಯಿಂದ ಆಸ್ತಿ ನಮ್ಮ ಹೆಸರಿಗೆ ಮಾಡಿಕೊಂಡಿರುತ್ತೇವೆ ಎಂದರ ಸರಿಯಲ್ಲ. ಪೀರಪ್ಪ ಮಾದಪ್ಪ ಅವರಿಗೆ ಬಿಟ್ಟುಕೊಟ್ಟಿದ್ದು ಆತ ರಾಯಪ್ಪ ಅವರಿಗೆ ಆಸ್ತಿ ಬಿಟ್ಟುಕೊಟ್ಟಿರಲಿಲ್ಲ ಎಂದರೆ ಸಾಕ್ಷಿ ಸದರಿ ಆಸ್ತಿ ಪೀರಪ್ಪ ಅವರ ಹೆಸರಿನಲ್ಲಿತ್ತು ಹಾಗಾಗಿ ಅವರು ಹೇಗೆ ಬಿಟ್ಟು ಕೊಡುತ್ತಾರೆ ಎಂದು ನುಡಿದಿರುತ್ತಾರೆ.

8. ಸರ್ವೇ ನಂಬರ 717 ಕ್ಷೇತ್ರ 9 ಎಕರೆ 37 ಗುಂಟೆ ಜಮೀನಿನ ಕಬ್ಜಾವಹಿವಾಟು ಇಲ್ಲಿಯವರೆಗೆ ಪೀರಪ್ಪ, ಮಾದಪ್ಪ ಹಾಗೂ ರಾಯಪ್ಪ ಅವರ ಮಕ್ಕಳೇ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ರಾಯಪ್ಪ ಇರುವುದಿಲ್ಲ ಪೀರಪ್ಪ ಹಾಗೂ ಮಾದಪ್ಪ ಅವರ ಮಕ್ಕಳು ಮಾಡಿಕೊಂಡು ಬರುತ್ತಿದ್ದಾರೆ ಎಂದು ನುಡಿದಿರುತ್ತಾರೆ. ಪ್ರಸ್ತೂತ ದಾವೆಯಲ್ಲಿ ನಾನು ¼ ಹಿಸ್ಸೆ ಕೇಳಿ ಎದುರುಕ್ಲೇಮದೊಂದಿಗೆ ನನ್ನ ಲಿಖಿತ ಹೇಳಿಕೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಲಕ್ಷ್ಮಣಗೆ ಬಂದಂತಹ ಆಸ್ತಿಗಳನ್ನು ಪ್ರಸ್ತೂತ ದಾವೆಯಲ್ಲಿ ಹಿಸ್ಸೆ ಕೇಳಿ ಕೌಂಟರ್ ಕ್ಲೇಮನಲ್ಲಿ ನಮೂದಿಸಿರುತ್ತೀರಾ ಎಂದರೆ ಸಾಕ್ಷಿ ನಮೂದಿಸಿರುತ್ತೇನೆ ಎಂದು ನುಡಿದಿರುತ್ತಾರೆ.

9. ಲಕ್ಷ್ಮಣ ಹೆಸರಿನಲ್ಲಿರುವ ಸರ್ವೇ ನಂಬರ 715/2, 715/4 ಮತ್ತು 715/5 ಆಸ್ತಿಗಳನ್ನು ಪ್ರಸ್ತೂತ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿ ಸೇರಿಸಿರುತ್ತೇವೆ ಎಂದು ಹೇಳುತ್ತಾರೆ. ಪುನಃ ಮತ್ತೊಂದು ಬಾರಿ ಸಾಕ್ಷಿಗೆ ಅದೇ ಪ್ರಶ್ನೆ ಕೇಳಲಾಗಿ ಸಾಕ್ಷಿ ಸೇರಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಲಕ್ಷ್ಮಣ ಸೇರಿದ ¼ ಹಿಸ್ಸೆ ಕೇಳಿದ್ದು ಆದರೆ ಆತನ ಹೆಸರಿನಲ್ಲಿರುವ ಆಸ್ತಿಗಳನ್ನು ಪ್ರಸ್ತೂತ ದಾವೆಯಲ್ಲಿ ಕೌಂಟರ ಕ್ಲೇಮನಲ್ಲಿ ಸೇರಿಸದೇ ಇರುವ ಕಾರಣ ಕೌಂಟರ ಕ್ಲೇಮ ಕಾನೂನಿನ ಅಡಿಯಲ್ಲಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

10. ಲಕ್ಷ್ಮಣ ಅವರ ಹೆಸರಿನಲ್ಲಿ ಬಾಂಬೆಯಲ್ಲಿ 2 ಮನೆಗಳು ಇರುತ್ತವೆ ಎಂದರೆ ಸರಿ. ಸದರಿ ಮನೆಗಳು ಪ್ರಸ್ತೂತ ದಾವೆಯಲ್ಲಿ ಸೇರಿಸಲಾಗಿರುತ್ತೀರಾ ಎಂದರೆ ಸಾಕ್ಷಿ ಸೇರಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಸದರಿ ಮನೆಗಳಿಗೆ ಸಂಬಂಧಿಸಿದಂತೆ

ದಾಖಲಾತಿಗಳನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಲಕ್ಷ್ಮಣಗೆ ಬರುವಂತಹ ಆಸ್ತಿಗಳಲ್ಲಿನ ಹಿಸ್ಸೆಯಲ್ಲಿ ಭಾಗವನ್ನು ನಮ್ಮ ಕೌಂಟರ ಕ್ಲೇಮನಲ್ಲಿ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ಅಂಶಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು**

6 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಜಿ ವಾಯ್ ಬಿ ವಕೀಲರಿಂದ

11. ಸೈದಪ್ಪ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ 4 ಜನಎಂದು ನುಡಿದಿರುತ್ತಾರೆ. ಅವರುಗಳು ಲಕ್ಷ್ಮಣ, ಪೀರಪ್ಪ, ಮಾದಪ್ಪ ಹಾಗೂ ರಾಯಪ್ಪ ಎಂದು ಇರುತ್ತಾರೆ. ಸೈದಪ್ಪ ಅವರಿಗೆ ಸರ್ವೇ ನಂಬರ 95/1 ಬಿ 1 ಎಕರೆ 12 ಗುಂಟೆ ಜಮೀನು ಇತ್ತು ಎಂದರೆ ಸರಿ. ಸದರಿ ಜಮೀನಿಗೆ ಸಂಬಂಧಿಸಿದಂತೆ 1995 ರಲ್ಲಿ ಸೈದಪ್ಪ ಅವರ ಮಕ್ಕಳು ವಾಟ್ನಿ ಮಾಡಿಕೊಂಡಿದ್ದರು ಎಂದರೆ ಸರಿ. ಅದರಂತೆ ಸರ್ವೇ ನಂಬರ 95/1 ಬಿ1 13 ಗುಂಟೆ ಜಮೀನು ಲಕ್ಷ್ಮಣ ಮಗನಾದ ಶಂಕರ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಸರ್ವೇ ನಂಬರ 95/1 ಬಿ2 13 ಗುಂಟೆ ಜಮೀನು ಮಾದಪ್ಪ ಅವರ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಸರ್ವೇ ನಂಬರ 95/1 ಬಿ3 26 ಗುಂಟೆ ಜಮೀನು ರಾಯಪ್ಪ ಅವರ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಸದರಿ ಪಾಲು ವಿಭಜನೆಗೆ ಕುಟುಂಬಸ್ದರ ಒಪ್ಪಿಗೆ ಇತ್ತು ಎಂದರೆ ಸರಿ. ಸದರಿ ಪಾಲು ವಿಭಜನೆಯಂತೆ ಡ ನಂಬರ 867 ಮಂಜೂರು ಆಗಿರುತ್ತದೆ ಎಂದರೆ ಸರಿ.

12. ಸರ್ವೇ ನಂಬರ 717 ರ 9 ಎಕರೆ 37 ಗುಂಟೆ ಜಮೀನನ್ನು ಪೀರಪ್ಪ ಸ್ವಂತ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಪೀರಪ್ಪನ ಸಹೋದರರಿಗೆ

ಯಾವುದೇ ಪಾಲು ಇರುವುದಿಲ್ಲ ಹೌದು ಸ್ವಂತ ದುಡಿಮೆಯಿಂದ ಆಸ್ತಿ ಖರೀದಿ ಮಾಡಿದ್ದು ನಿಜ ನಂತರದಲ್ಲಿ ಮಾದಪ್ಪ ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಆಸ್ತಿ ಖರೀದಿ ಮಾಡುವಾಗ ಮಾದಪ್ಪ ಅವರು ಕೈಗಡ ಸಾಲವನ್ನು ನೀಡಿದ್ದು ಆ ಕಾರಣಕ್ಕಾಗಿ 3 ಎಕರೆ ಜಮೀನನ್ನು ಆತನಿಗೆ ನೀಡಲಾಗಿತ್ತು ಎಂದರೆ ಸರಿ. ಸದರಿ ಆಸ್ತಿಯಲ್ಲಿ ಮಾದಪ್ಪ, ರಾಯಪ್ಪ ಹಾಗೂ ಲಕ್ಷ್ಮಣ ಅವರ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿ. ಸರ್ವೇ ನಂಬರ 717 ಜಮೀನು 1995 ರಲ್ಲಿ ಪಾಲು ಮಾಡಿಕೊಳ್ಳುವ ಮೊದಲೇ ಖರೀದಿ ಮಾಡಲಾಗಿತ್ತು ಎಂದರೆ ಸರಿ. ಮಾದಪ್ಪ, ರಾಯಪ್ಪ ಮತ್ತು ಲಕ್ಷ್ಮಣ ಅವರಿಗೆ ಸದರಿ ಆಸ್ತಿಯಲ್ಲಿ ಹಕ್ಕು ಇಲ್ಲ ಎಂಬ ಕಾರಣದಿಂದ ಸರ್ವೇ ನಂಬರ 95/1 ಬಿ ಜಮೀನನ್ನು ಖರೀದಿ ಮಾಡಿಕೊಳ್ಳುವ ಸಮಯಕ್ಕೆ ಸೇರಿಸಿಲ್ಲ ಎಂದರೆ ಸರಿ.

13. ಸರ್ವೇ ನಂಬರ 67/1 ಆಸ್ತಿ ವಾದಿಯ ಹೆಸರಿನಲ್ಲಿತ್ತು ಎಂದರೆ ಸರಿ. ಅದೇ ರೀತಿ 1973 ರಲ್ಲಿ ಖರೀದಿ ಮಾಡಿದ ಸರ್ವೇ ನಂಬರ 29/1, 5 ಎಕರೆ ಜಮೀನು ಸಹ ಆತನ ಹೆಸರಿನಲ್ಲಿತ್ತು ಎಂದರೆ ಸರಿ. ಸೈದಪ್ಪನ ಮಕ್ಕಳು ವಾಟ್ನಿ ಮಾಡಿಕೊಂಡ ನಂತರ ಮಂಜೂರಾದ ಡ ನಂಬರ 867 ನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ನ್ಯಾಯಾಧೀಶರು ವ

ಜೆ ಎಂ ಎಫ್ ಸಿ, ಸಿಂದಗಿ.